ಅವರು ಬಹಳ ಜಾತ್ಯಾತೀತವಾಗಿ ವಿಜೃಂಭಿಸುತ್ತಾರೆಂದೂ ಕೂಡ ಹೇಳುವುದಕ್ಕಾಗುವುದಿಲ್ಲ. ಈ ಸಭೆಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ವ್ಯಂಗ್ಯವಿರಲಿಲ್ಲ. ಅವರ ಮಾತಿನಲ್ಲಿ ಯಾವಾಗಲೂ ಹರಿತವಿರುತ್ತದೆ. ಅದನ್ನು ತಾವೂ ಕೂಡ ಗಮನಿಸಿದ್ದೀರಿ. ಇಲ್ಲಿ ವಿರೋಧಪಕ್ಷದ ನಾಯಕರು ಬೇರೆ ಅಭಿಪ್ರಾಯದಲ್ಲಿ ಚಿತ್ರಿಸಿಕೊಳ್ಳುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿಲ್ಲ. ತಮಗೆ ಅದು ಕಡತದಲ್ಲಿ ಮಾಹಿತಿ ಬೇಕಾಗಿದೆ ಎನ್ನುವಂತಹ ಮಟ್ಟಕ್ಕೆ ಆಗಿದ್ದರೆ ಅದು ಕಡತದಲ್ಲಿ ಹೋಗಲಿ. ಆದರೆ ಯಾರು ಜಾತಿ ವಾದಿಗಳು ಯಾರು ಅಲ್ಲವೆನ್ನುವಂಥಾದ್ದು ಅವರ ನಡವಳಿಕೆಯ ಮೂಲಕ ಸಮಾಜ ನಿರ್ಣಯ ಮಾಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಕೇಳುವಂತಹ ವಿಷಯ ಬೇರೆ.

ಉಪಾಧ್ಯಕ್ಷರು : ಈಗ ಅದರ ಬಗ್ಗೆ ಚರ್ಚೆ ಬೇಡ, ಈಗ ಅದರ ಬಗ್ಗೆ ಕ್ಲಾರಿಫಿಕೇಷನ್ ಆಗಿದೆ, ಈಗ ಮತ್ತೆ ಚರ್ಚೆ ಏಕೆ ಬೇಕು? ಅದಕ್ಕೆ ಉತ್ತರವನ್ನು ಹೇಳಿದ್ದಾರೆ, ಈ ವಿಷಯ ಇಲ್ಲಿಗೆ ಮುಗಿಯಿತು. ಇವತ್ತು ಅಧಿವೇಶನದ ಕೊನೆಯ ದಿವಸವಾಗಿದೆ. ನಾವು ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ತಾವು ದಯಮಾಡಿ ಸಹಕರಿಸಬೇಕು.

ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳವರು ರೈತರಿಗೆ ಕಬ್ಬಿನ ಬಾಕಿಯನ್ನು ಪಾವತಿ ಮಾಡದೇ ಇರುವುದು

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಕ್ಕರೆ ಮಂತ್ರಿಗಳು ಹಾಗೂ ಮಂಡ್ಯ ಉಸ್ತುವಾರಿ ಮಂತ್ರಿಗಳು ದಯಮಾಡಿ ಗಮನಿಸಬೇಕು. ಪ್ರತಿ ವರ್ಷ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಯಾವಾಗಲೂ ಪ್ರಾಸಂಗಿಕವಾಗಿ ಕರ್ನಾಟಕದ ಎಲ್ಲಾ ಸಕ್ಕರೆ ಕಾರ್ಖಾನೆಯವರನ್ನು ಕರೆದು ಸಭೆಯನ್ನು ನಡೆಸಲಾಗುತ್ತಿತ್ತು. ಆ ಸಭೆಯಲ್ಲಿ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿಯ ಬಗ್ಗೆ ಯಾವುದು ನಷ್ಟದಲ್ಲಿದೆ, ಯಾವುದು ಲಾಭದಲ್ಲಿದೆ ಎನ್ನುವ ವಿಚಾರಗಳನ್ನೆಲ್ಲಾ ಚರ್ಚೆ ಮಾಡಲಾಗುತ್ತಿತ್ತು. ಅದು ಜೂನ್, ಜುಲೈನಲ್ಲಿ ಒಂದು ಬ್ಯಾಚ್‌ನಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗುತ್ತಿತ್ತು. ಅಕ್ಟೋಬರ್, ನವೆಂಬರ್‌ನಲ್ಲಿ, ಡಿಸೆಂಬರ್‌ನಲ್ಲಿ ಕೆಲವು ಕಾರ್ಖಾನೆಗಳು ಶುರುವಾಗುತ್ತಿತ್ತು. ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುತ್ತಿತ್ತು. ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಕಬ್ಬನ್ನು ಅರೆಯುವಂತಹ ಸಾಮರ್ಥ್ಯವಿರುವಂತಹ ಕೆಲವು ಖಾಸಗಿ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಬಾಗಿಲು ಹಾಕಿವೆ. ಈ ರೀತಿಯಾಗಿ ನಾಲ್ಕು ಕಾರ್ಖಾನೆಗಳು ಬಾಗಿಲು ಹಾಕಿವೆ. ಈಗಾಗಲೇ ಎರಡು ವರ್ಷಗಳಿಂದ ಹೆಚ್ಚುವರಿ ಕಬ್ಬಿನಿಂದ ನಷ್ಟವನ್ನು ಅನುಭವಿಸುತ್ತಿರುವಂತಹ ರೈತರು ಇದ್ದಾರೆ ಯಾವ್ಯಾವ ಕಾರ್ಖಾನೆಗಳಲ್ಲಿ ಎಕ್ಸಸ್ ಇದೆ, ಯಾವ್ಯಾವ ಕಾರ್ಖಾನೆಗಳಲ್ಲಿ ಕಡಿಮೆ ಇದೆ, ಅದನ್ನು ಯಾವ ರೀತಿಯಾಗಿ ಡೈವರ್ಟ್ ಮಾಡಬೇಕು, ಮತ್ತೆ ಈಗ ಕಾರ್ಖಾನೆಗಳನ್ನು ಶುರು ಮಾಡಿರುವಂಥಾದ್ದಕ್ಕೆ ಬೆಲೆಯನ್ನು ಯಾವ ರೀತಿಯಾಗಿ ನಿಗದಿ ಮಾಡಬೇಕು. ಇದರ ಬಗ್ಗೆ ಸುಮಾರು ಸಲ ಹೇಳಿದ್ದೇನೆ. ತಾವು ಪ್ರತಿ ವರ್ಷ ತಮ್ಮ ನಿಯಮಾವಳಿಯ ಪ್ರಕಾರ ಕೆಲಸ ಮಾಡದಿದ್ದರೆ ಕಬ್ಬು ಬೆಳೆಯುವಂತಹ ರೈತರಿಗೆ ಕೊನೆಯಲ್ಲಿ ಬಹಳ ಕಷ್ಟವಾಗುವಂತಹ ಪರಿಸ್ಥಿತಿ

ಬರುತ್ತದೆ. ಈ ಕೆಲಸವನ್ನು ಪರಿಪೂರ್ಣವಾಗಿ ಮಾಡಬೇಕು, ಮತ್ತೆ ಕಬ್ಬು ಬೆಳೆಗಾರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತೆ ಕಾಳಮತ್ತಿನದೊಡ್ಡಿಯಲ್ಲಿ ಹಳೆಯ ಬಾಕಿಗೋಸ್ಕರ ಚಳುವಳಿ ಮಾಡುತ್ತಿದ್ದಾರೆ, ಅವರಿಗೆ ಹೋದ ವರ್ಷದ ಕಬ್ಬಿನ ಬಾಕಿಯನ್ನು ಕೊಟ್ಟಿಲ್ಲ, ಇದು ಯಾವ ನ್ಯಾಯ? ಅವರಿಗೆ ಈ ರೀತಿಯಾಗಿ ಒಂದು ವರ್ಷದ ಬಾಕಿಯನ್ನು ಕೊಡಲಿಲ್ಲವೆಂದರೆ ಏನು ಮಾಡಬೇಕು? ಆದುದರಿಂದ ಇದರ ಬಗ್ಗೆ ಸಕ್ಕರೆ ಸಚಿವರು ಮತ್ತು ಮಂಡ್ಯ ಉಸ್ತುವರಿ ಸಚಿವರು ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೆ.ಎಸ್. ಪುಟ್ಟಣ್ಣಯ್ಯನವರು ಪ್ರಸ್ತಾವ ಮಾಡಿದಂತೆ ಪ್ರತಿ ವರ್ಷವೂ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಬ್ಬಿನ ಬೆಲೆಯನ್ನು ನಿಗದಿ ಪಡಿಸಲು ಕಳೆದ ಹತ್ತಾರು ವರ್ಷಗಳಿಂದ ಸಭೆಯನ್ನು ಕರೆಯುತ್ತಿದ್ದರು. ರಾಜ್ಯದ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುವದಕ್ಕಿಂತ ಮುಂಚೆ ಬೆಲೆ ನಿಗದಿ ಮಾಡುವಂತಹ ಪದ್ದತಿ ಜಾರಿಯಲ್ಲಿತ್ತು. ಆದರೆ ಕಳೆದ ವರ್ಷದಿಂದ ಹೈಕೋರ್ಟ ಅದನ್ನು ಸ್ಟೇ ಮಾಡಿದ ಕಾರಣ ಆ ಸಭೆಯನ್ನು ಕರೆಯಲಾಗಲಿಲ್ಲ. ಆದರೂ ಸಹ ನಾನು ಸಕ್ಕರೆ ಸಚಿವನಾಗಿ ಪ್ರತಿ ತಿಂಗಳು ರಾಜ್ಯದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳವರ ಸಭೆಯನ್ನು ಕರೆದು ಆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವಂತಹ ಕಬ್ಬಿನ ಪ್ರಮಾಣವೆಷ್ಟು ? ಅದನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು. ಎಂಬ ಬಗ್ಗೆ ಸಭೆಯನ್ನು ಮಾಡುತ್ತಿದ್ದೇವೆ. ಈ ವರ್ಷವೂ ಸಹ 6ನೇ ತಾರೀಖು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಯವರನ್ನು ಸಭೆ ಕರೆದು ಆ ಭಾಗಗಳಲ್ಲಿ ಬೆಳೆಯುವಂತಹ ಕಬ್ಬಿನ ಪ್ರಮಾಣವೆಷ್ಟು ? ಅದಕ್ಕೆ ಯಾವ ರೀತಿಯಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವ ಉದ್ದೇಶದಿಂದ ಈಗಾಗಲೇ ಚರ್ಚೆಯನ್ನು ಮಾಡಿದ್ದೇವೆ. ಈ ದಿಸೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ 5ರಿಂದ 8ಲಕ್ಷ ಟನ್‌ಗೂ ಹೆಚ್ಚು ಕಬ್ಬಿನ ಉತ್ಪಾದನೆಯಾಗುತ್ತಿತ್ತು. ರಾಜ್ಯದ ಬೇರೆ ಎಲ್ಲೂ ಇಷ್ಟು ಉತ್ಪಾದನೆಯಾಗುವಂತಹ ಸಂಭವವಿಲ್ಲ. ಮುಂದಿನ ದಿವಸಗಳಲ್ಲಿ ಬೆಲ್ಲದ ದರವನ್ನು ಆಧರಿಸಿ ಕಬ್ಬನ್ನು ಯಾವ ರೀತಿಯಾಗಿ ಬಳಸಬೇಕೆನ್ನುವುದನ್ನು ವಿಚಾರ ಮಾಡಿದ್ದೇವೆ. ಆ ದಿಶೆಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇವೆ. ಬೆಲ್ಲದ ಬೆಲೆಯನ್ನು ನಿಗದಿಪಡಿಸಲು ಈ ತಿಂಗಳ 25ನೇ ತಾರೀಖಿನಂದು ಎಲ್ಲಾ ಸಕ್ಕರೆಯವರನ್ನು ಅಂದರೆ ಸರ್ಕಾರಿ ರಂಗದಲ್ಲಿರುವಂತಹ ಸಕ್ಕರೆ ಕಾರ್ಖಾನೆಗಳು, ಖಾಸಗಿ ವಲಯದ ಮತ್ತು ಜಾಯಿಂಟ್‌ಸೆಕ್ಟಾರ್‌ನಲ್ಲಿರುವಂತಹ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಸಭೆಗೆ ಕರೆದು ಬೆಲೆ ನಿಗದಿ ಬಗ್ಗೆ ತೀರ್ಮಾನ ಮಾಡುತ್ತೇವೆ. ಇದು ತೀರ್ಮಾನವಾದ ಮೇಲೆ ರೈತರ ಸಭೆಯನ್ನು ಮುಂದಿನ ತಿಂಗಳ ಮೊದಲ ವಾರದಲ್ಲಿ ಸಭೆ ಕರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮ ಮುಖೇನಾ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ.ಎನ್ ನಾಗೇಗೌಡ: (ಭಾರೀ ನೀರಾವರಿ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕೆ.ಎಸ್. ಪುಟ್ಟಣ್ಣಯ್ಯನವರು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಎರಡು ವಿಚಾರಗಳನ್ನು ಬಗೆಹರಿಸಬೇಕೆಂದು ಕೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಚಾಮುಂಡೇಶ್ವರಿ ಸಕ್ಕರ ಕಾರ್ಖಾನೆಯಲ್ಲಿ ಹೋದ ವರ್ಷದ ಪೆಂಡಿಂಗ್ ಬಿಲ್‌ನ ಹಣವನ್ನು ಕೊಡಬೇಕೆಂದು ಮುಷ್ಕರ ಮಾಡುತ್ತಿದ್ದರು. ಈ ವಿಚಾರವನ್ನು ಮಾನ್ಯ ಉಮೇಶ್ ಕತ್ತಿಯವರ ಹತ್ತಿರ ನಾನು ಮಾತನಾಡಿದ್ದೇನೆ.

ನಿನ್ನೆ ಈ ಸಕ್ಕರೆ ಕಾರ್ಖಾನೆಯ ಮ್ಯಾನೇಜಿಂಗ್ ಡೈರಕ್ಟರ್‌ರವರನ್ನು ಕರೆದು ಈ ವಿಚಾರವನ್ನು ಚರ್ಚೆ ಮಾಡಿದ್ದಾರೆ. ಅವರು ಜೂನ್ ತಿಂಗಳ ಮೊದಲನೆಯ ವಾರದಲ್ಲಿ 3 ರಿಂದ 4 ಕೋಟಿ ರೂಪಾಯಿಗಳ ಅರಿಯರ್ಸ್ ಕೊಡುವುದಕ್ಕೆ ಒಪ್ಪಿದ್ದಾರೆ. ಅವರು ಅದನ್ನು ಕೊಡದೇ ಹೋದರೆ ಆ ಕಾರ್ಖಾನೆಯ ಮೇಲೆ ಉಗ್ರವಾದಂತಹ ಕ್ರಮ ತೆಗೆದುಕೊಳ್ಳುತ್ತೇವೆ, ನಾನೂ ಸಹ ಆ ಕಾರ್ಖಾನೆಯ ಮ್ಯಾನೆಜಿಂಗ್ ಡೈರಕ್ಟರ್ ರವರಿಗೆ ಜೂನ್ ತಿಂಗಳ ಒಳಗೆ ರೈತರಿಗೆ ಈ ಪೆಂಡಿಂಗ್ ಹಣವನ್ನು ಕೊಡಬೇಕೆಂದು ಹೇಳಿದ್ದೇನೆ. ಅದಕ್ಕೆ ಅವರು ಜೂನ್ ತಿಂಗಳ ಮೊದಲ ವಾರದೊಳಗೆ ಪೇಮೆಂಟ್ ಶುರು ಮಾಡುತ್ತೇವೆಂದು ಹೇಳಿ ಹೋಗಿದ್ದಾರೆ. ಅವರು ಇದನ್ನು ಕೊಡುತ್ತಾರೆಂದು ನಾನು ಮಾನ್ಯ ಪುಟ್ಟಣ್ಣಯ್ಯನವರಿಗೆ ತಿಳಿಸಬಯಸುತ್ತೇನೆ. ಇನ್ನು ಎರಡನೆಯ ವಿಚಾರ 2-3 ಸಕ್ಕರೆ ಕಾರ್ಖಾನೆಗಳಿಗೆ ಅವು ಹೇಮಾವತಿ ಶುಗರ್ ಫ್ಯಾಕ್ಟರಿ ಮತ್ತು ಚುಂಚನಕಟ್ಟೆ ಬನ್ನೇರಮ್ಮ ಸಕ್ಕರೆ ಕಾರ್ಖಾನೆಗಳ ಮೀಟಿಂಗ್ ಅನ್ನು ಮಂಡ್ಯದಲ್ಲಿ ಮಾಡಿದ್ದಾರೆ, ಅವರು ಒಂದೊಂದು ಲಕ್ಷ ಟನ್ ಕಬ್ಬನ್ನು ತೆಗೆದುಕೊಳ್ಳಬೇಕೆಂದು ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅವರಿಗೆ ಒಂದೊಂದು ಲಕ್ಷ ಟನ್ ಹೆಚ್ಚುವರಿ ಕಬ್ಬನ್ನು ಸಾಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಮತ್ತೆ ಮಂಡ್ಯದಲ್ಲಿ 25ನೇ ತಾರೀಖಿನಂದು ಮೀಟಿಂಗ್ ಕರೆದಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಅರಣ್ಯ ಲೂಟಿ

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತರುವುದೆನೆಂದರೆ ಕೊಡಗು ಜಿಲ್ಲೆಯಲ್ಲಿ ಅರಣ್ಯ ಲೂಟಿ ಸತತವಾಗಿ ನಡೆಯುತ್ತಿದೆ. ನಾನು ಸದನದಲ್ಲಿ ಉಲ್ಲೇಖ ಮಾಡಲು ಇಚ್ಛಿಸುವುದೆನೆಂದರೆ 1992ರಲ್ಲಿ ಆದಂತಹ ಅರಣ್ಯ ಲೂಟಿಯ ಬಗ್ಗೆ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಕೇರಳದ ಹಿರಿಯ ಪೊಲೀಸ್ ಅಧಿಕಾರಿ ಡಿ.ಐ. ಜಿಯಾಗಿರುವಂತಹ ಶ್ರೀ ಜಾರ್ಜ್ ಜೇಕಬ್ ರವರ ಪತ್ನಿ ಡೈಸಿ ಜೇಕಬ್‌ರವರು ಮಡಿಕೇರಿ ತಾಲ್ಲೂಕಿನ ಭಾಗಮಂಡಲದ ಕೋಪಟ್ಟಿ ಗ್ರಾಮದಲ್ಲಿರುವ ಸರ್ವೆ ನಂಬರ್ 1:19 ಹಾಗೂ 1:23ರಲ್ಲಿರುವ ಒಟ್ಟಾರೆ 135 ಎಕರೆ ಸ್ಥಳದಲ್ಲಿ ರಬ್ಬರ್ ಕೃಷಿಗೆ ಅನುಕೂಲ ಮಾಡಿಕೊಳ್ಳಲು ಸಂಬಂಧಿತ ಸ್ಥಳದಲ್ಲಿ ಮರಗಳನ್ನು ಕಡಿಯಲು ಪರವಾನಗಿಯನ್ನು ಕೋರಲಾಗಿತ್ತು.

ಉಪಾಧ್ಯಕ್ಷರು : ತಾವು ಶೂನ್ಯ ವೇಳೆಯಲ್ಲಿ ಸಂಕ್ಷಿಪ್ತವಾಗಿ ವಿಷಯವನ್ನು ಪ್ರಸ್ತಾಪ ಮಾಡಬೇಕು. ನೀವು ಪುಸ್ತಕದಲ್ಲಿ ಬರೆದುಕೊಂಡು ಬಂದು ಓದುತ್ತಾ ನಿಂತರೆ ಆಗುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜ್ : ಇವರು ದಿ:13.4.1992ರಲ್ಲಿ ಪತ್ರ ಬರೆದಿದ್ದಾರೆ. ಇದನ್ನು ಜಿಲ್ಲಾಧಿಕಾರಿಯವರು ಪರಿಶೀಲನೆ ಮಾಡಿ ಸ್ಥಳ ಮತ್ತು ಸ್ಥಳದಲ್ಲಿರುವಂತಹ ಮರಗಳ ಮೇಲೆ ಹಕ್ಕಿದೆ. ಈ ಹಕ್ಕನ್ನು ಇವರು ಚಲಾವಣೆ ಮಾಡುವುದಕ್ಕೋಸ್ಕರ ಮುಂದಿನ ಕ್ರಮಕ್ಕೆ ಏನು ಮಾಡುತ್ತಾರೆಂದರೆ ಈ ಅರ್ಜಿಯನ್ನು ಅರಣ್ಯಾಧಿಕಾರಿಗಳಿಗೆ ರವಾನೆ ಮಾಡುತ್ತಾರೆ. ಇದಕ್ಕೆ ಮಡಿಕೇರಿ ಉಪ ಅರಣ್ಯಾಧಿಕಾರಿ ಈ ಪ್ರದೇಶವನ್ನು ವೀಕ್ಷಣೆ ಮಾಡಿ ಇದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಇಲ್ಲಿ ಯಾವುದೇ ಕಾರಣಕ್ಕೂ ಮರಗಳನ್ನು ಕಡಿಯಬಾರದೆಂದು, ಈ ರೀತಿ ಮರಗಳನ್ನು ಕಡಿದರೆ ಬಹಳಷ್ಟು ಧಕ್ಕೆಯಾಗುತ್ತದೆ. ಆ ದೃಷ್ಟಿಯಿಂದ ಈ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದಲ್ಲವೆಂದು ಅರ್ಜಿಯನ್ನು